2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 198/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಭರತ್ | ಪಿಡಬ್ಲೂ -7 |
| ತಂದೆಯ ಹೆಸರು | - | ಮಂಜಪ್ಪಶೆಟ್ಟಿ | ಸಿಡಬ್ಲೂ -11 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಆಟೋ ಚಾಲಕ | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 09-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಈ ದಿನ ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರುಪಡಿಸಿರುವ ಆರೋಪಿ ಗೊತ್ತು, ಆತ ಗೌರಿಕಾಲುವೆಯಲ್ಲಿರುವ ನಮ್ಮ ಪಕ್ಕದ ಮನೆಯ ವಾಸಿ. ಸಹ ಪಂಚರಾದ ಚಾಸಾ.10 ರವರು ಗೊತ್ತು.

2. ಮೃತೆ ಸುಧಾ ಗೊತ್ತು, ಆಕೆ ಆರೋಪಿಯ ತಾಯಿ. ಫ್ರಾಸಾ.1 ರವರು ಮೃತ ಸುಧಾರವರ ಕಿರಿಯ ಮಗ ಮತ್ತು ಆರೋಪಿಯ ತಮ್ಮ.

3. ನಾನು ಆಟೋ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೇನೆ. 2021 ನೇ ಇಸವಿ ಆಯುಧ ಪೂಜೆಯನ್ನು ನಡೆಸುವ ತಿಂಗಳಿನಲ್ಲಿ ಒಂದು ದಿನ ಬಸವನಹಳ್ಳಿ ಪೊಲೀಸರು ಮಹಜರ್ ಗಾಗಿ ಗೌರಿಕಾಲುವೆಯ ಜೈ ಭಾರತ್ ಆಟೋ ಸರ್ಕಲ್ ಹತ್ತಿರ ಬಂದಿದ್ದರು. ಆಗ ನಾನು ಚಾಸಾ.10 ಹರೀಶ್ ರವರ ಕ್ಯಾಂಟೀನ್ ನಲ್ಲಿ ಕುಳಿತಿದ್ದೆನು. ಆಗ ಪೊಲೀಸರು ಅಲ್ಲಿಗೆ ಬಂದು ನನಗೆ

ಮತ್ತು ಚಾಸಾ.10 ರವರನ್ನು ಶಾರದಾ ಮತ್ತು ರವಿ ಎಂಬುವವರ ಮನೆಗೆ ಮಹಜರ್ ಗೆ ಬರಬೇಕು ಎಂದು ಕರೆದರು. ಅದರಂತೆ ನಾನು ಮತ್ತು ಚಾಸಾ.10 ರವರು ಗೌರಿಕಾಲುವೆ ವಾಟರ್ ಟ್ಯಾಂಕ್ ಬಳಿ ಇರುವ ಶಾರದಾ ಮತ್ತು ರವಿರವರಿಗೆ ಸೇರಿದ ಬಿಲ್ಡಿಂಗ್ ನಲ್ಲಿ ಒಂದನೇ ಮಹಡಿಯಲ್ಲಿದ್ದ ಮನೆಗೆ ಹೋದೆವು.

4. ಸದರಿ ಒಂದನೇ ಮಹಡಿಯ ಮನೆಯಲ್ಲಿ ಮೃತ ಸುಧಾ ಮತ್ತು ಆಕೆಯ ಮಕ್ಕಳಾದ ಆರೋಪಿ ಮತ್ತು ಫ್ರಾಸಾ.1 ರವರು ವಾಸವಾಗಿದ್ದರು. ನಾವು ಮಹಜರ್ ಗೆ ಹೋದಾಗ ಫ್ರಾಸಾ.1 ಸಂತೋಷ್, ಯತೀಶ್ ಮತ್ತು ಪೊಲೀಸರು ಇದ್ದರು. ಅವರು ಆರೋಪಿಯನ್ನು ಜೀಪಿನಲ್ಲಿ ಕರೆದುಕೊಂಡು ಬಂದಿದ್ದರು. 1 ನೇ ಮಹಡಿಯಲ್ಲಿ ಮೃತ ಸುಧಾ ವಾಸವಾಗಿದ್ದ ಮನೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು ಅದನ್ನು ಪೊಲೀಸರು ತೆಗೆಸಿದರು. ನಂತರ ಆರೋಪಿ ಅಮ್ಮಾ ಎಲ್ಲಿ ಇದ್ದಾರೆ ಎಂದು ಕೇಳಿದನು, ಆಗ ಪೊಲೀಸರು ಆಕೆ ಆಸ್ಪತ್ರೆಯಲ್ಲಿ ಇರುವುದಾಗಿ ತಿಳಿಸಿದರು. ನಂತರ ಆರೋಪಿ ನಮ್ಮನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಮೊದಲಿಗೆ ಅಡುಗೆ ಮನೆಯ ಹತ್ತಿರ ಹೋಗಿ ಸುಧಾ ರವರು ಅಡುಗೆ ಮಾಡಿ ಪಾತ್ರೆಯನ್ನು ತೊಳೆದಿಟ್ಟು ಬರುವಾಗ ಆತ ಆಕೆಯ ಬಳಿ ದುಡ್ಡನ್ನು ಕೇಳಿದ್ದಾಗಿ ಆಗ ಅವರು ಆತನಿಗೆ ದುಡ್ಡನ್ನು ಕೊಡದಿದ್ದಾಗ ಆತ ಸುಧಾ ರವರ ಜುಟ್ಟನ್ನು ಹಿಡಿದು ಗೋಡೆಗೆ ಗುದ್ದಿದ್ದಾಗಿ ನಂತರ ಅವರು ತಪ್ಪಿಸಿಕೊಂಡು ಓಡಿ ಬರುವಾಗ ಹಾಲಿನಲ್ಲಿದ್ದ ಮನೆಯ ಮುಂಭಾಗದ ಬಾಗಿಲ ಹತ್ತಿರ ಜಾರಿ ಬಿದ್ದಾಗ ಟೈಲ್ಸ್ ನ ಕಟ್ಟೆಯ ಭಾಗ ಆಕೆಯ ತಲೆಗೆ ತಾಗಿದ್ದಾಗಿ ನಂತರ ಆರೋಪಿ ತನ್ನ

ಕಾಲಿನಿಂದ ಆಕೆಯ ತಲೆಯನ್ನು ತುಳಿದು ಅಲ್ಲಿಯೇ ನಿಂತುಕೊಂಡಿದ್ದಾಗಿ ತಿಳಿಸಿ ಸದರಿ ಸ್ಥಳವನ್ನು ತೋರಿಸಿದನು. ಸದರಿ ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 10.50 ಗಂಟೆಯಿಂದ 11.45 ಅಥವಾ 12.00 ಗಂಟೆಯವರೆಗೆ ಮಹಜರ್ ಮಾಡಿಕೊಂಡು ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ.

**5.** ಸಾಕ್ಷಿಯು ನೋಟೀಸು, ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸು ಮತ್ತು ಮಹಜರ್ ಗಳನ್ನು ಕ್ರಮವಾಗಿ ನಿಪಿ.16 ಮತ್ತು ನಿಪಿ.17 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.16(ಎ) ಮತ್ತು ನಿಪಿ.17(ಎ) ಎಂದು ಗುರುತಿಸಲಾಯಿತು.

6. ನಾವು ಅಲ್ಲಿ ನೋಡಿದಾಗ ಗೋಡೆ ಮತ್ತು ನೆಲದ ಮೇಲೆ ರಕ್ತದ ಕಲೆಗಳು ಇದ್ದವು.

**7.** ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಫೋಟೋವನ್ನು ಆ ದಿನ ಪೊಲೀಸರು ಮೇಲೆ ಹೇಳಿದಂತೆ ಮೃತ ಸುಧಾರವರ ಮನೆಯಲ್ಲಿ ಮಹಜರ್ ಮಾಡಿಕೊಳ್ಳುವ ಸಮಯದಲ್ಲಿ ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.18 ಎಂದು ಗುರುತಿಸಲಾಯಿತು.

8. ಸದರಿ ಫೋಟೋದಲ್ಲಿ ಚಾಸಾ.10 ಹರೀಶ್, ಆರೋಪಿ ದುಷ್ಯಂತ್ ಮತ್ತು ಪೊಲೀಸರು ಇರುವುದಾಗಿ ನುಡಿದಿರುತ್ತಾರೆ.

<u>ಪಾಟೀ ಸವಾಲು: ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದ ಆರೋಪಿ ಪರವಾಗಿಃ</u>

9. ಫ್ರಾಸಾ.1 ರವರು ನಿಮ್ಮ ಸ್ನೇಹಿತ ಎಂದರೆ ಸಾಕ್ಷಿ ಸ್ನೇಹಿತನಲ್ಲ ಆದರೆ ಮನೆಯ ಪಕ್ಕದಲ್ಲಿ ವಾಸವಾಗಿದ್ದುದ್ದರಿಂದ ಪರಿಚಯ ಅಷ್ಟೇ ಎನ್ನುತ್ತಾರೆ. ಮೃತ ಸುಧಾರವರು ಎಲ್ಲಿಗಾದರೂ ಹೋಗಬೇಕಾದರೇ ನಿಮ್ಮ ಆಟೋದಲ್ಲಿಯೇ ಹೋಗುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಸರ್ಕಲ್ ನಲ್ಲಿದ್ದ ಎಲ್ಲಾ ಆಟೋ ಚಾಲಕರೊಂದಿಗೆ ಸುಧಾರವರು ವಿಶ್ವಾಸದಿಂದ ಇದ್ದರು ಅವರು ನನ್ನ ಆಟೋದಲ್ಲಿ ಸಹ ಕೆಲವೊಮ್ಮೆ ಓಡಾಡುತ್ತಿದ್ದರು ಮತ್ತು ಬೇರೆಯವರ ಆಟೋದಲ್ಲಿಯೂ ಸಹ ಓಡಾಡುತ್ತಿದ್ದರು.

10. ಘಟನೆಯ 2-3 ವರ್ಷಗಳ ಹಿಂದಿನಿಂದ ಸುಧಾರವರು ಸದರಿ ಮನೆಯಲ್ಲಿ ತಮ್ಮ ಮಕ್ಕಳೊಂದಿಗೆ ವಾಸವಾಗಿದ್ದರು. ನೀವು ಅವರ ಪಕ್ಕದ ಮನೆಯಲ್ಲಿಯೇ ವಾಸವಾಗಿದ್ದಿರಿ ಎಂದರೆ ಸರಿ. ನೀವು ಅವರ ಪಕ್ಕದ ಮನೆಯಲ್ಲಿ ವಾಸವಾಗಿದ್ದರಿಂದ ಸುಧಾರವರ ಮನೆಯವರ ಚಲನವಲನಗಳು ನಿಮಗೆ ತಿಳಿದಿತ್ತು ಎಂದರೆ ಸರಿ. ಫ್ರಾಸಾ.1 ರವರು ಎ ಐ ಟಿ ಕಾಲೇಜಿನಲ್ಲಿ ಓದುತ್ತಿದ್ದನು ಆದರೆ ಆರೋಪಿ ಮನೆಯಲ್ಲಿಯೇ ಇರುತ್ತಿದ್ದನು. ಆರೋಪಿ ಮನೆಯನ್ನು ಬಿಟ್ಟು ಎಲ್ಲಿಗೂ ಹೋಗುತ್ತಿರಲಿಲ್ಲ ಎಂದರೆ ಸರಿ. ಆರೋಪಿ ಮನೆಯಿಂದ ಯಾಕೆ ಬರುತ್ತಿರಲಿಲ್ಲವೆಂದು ನೀವು ಸುಧಾರವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಆರೋಪಿ ಅಪರೂಪಕ್ಕೆ ಒಮ್ಮೆ ಫಂಕ್ಷನ್ ಗಳು ಇದ್ದಾಗ ಮನೆಯಿಂದ ಹೊರಗೆ ಬರುತ್ತಿದ್ದನು ಮತ್ತು ಯಾವುದಾದರೂ ಹಬ್ಬಗಳಲ್ಲಿ ದೇವಸ್ಥಾನಕ್ಕೆ ಹೋಗಲು ಆತನ

ತಾಯಿ ಆತನನ್ನು ಹೊರಗೆ ಕರೆದುಕೊಂಡು ಹೋಗುತ್ತಿದ್ದರು.

11. ಆರೋಪಿ ತನ್ನ ತಾಯಿಯನ್ನು ಬಿಟ್ಟು ಒಬ್ಬನೇ ಎಲ್ಲಿಗೂ ಹೊರಗೆ ಹೋಗುತ್ತಿರಲಿಲ್ಲ ಎಂದರೆ ಸರಿ. ಆರೋಪಿ ಸೈಕೋ ರೀತಿ ವರ್ತಿಸುತ್ತಿದ್ದನು, ಆತನಿಗೆ ತಾನು ಏನು ಮಾಡುತ್ತೇನೆ ಎಂಬುದರ ಬಗ್ಗೆ ಅರಿವು ಇರಲಿಲ್ಲ. ಆರೋಪಿಯನ್ನು ತನ್ನ ತಾಯಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಬಗ್ಗೆ ನಿಮಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಕರೆದುಕೊಂಡು ಹೋಗುತ್ತಿದ್ದರು ಆದರೆ ಯಾವ ಆಸ್ಪತ್ರೆಗೆ ಮತ್ತು ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ ಆದರೆ ಒಮ್ಮೆ ಉಪ್ಪಳ್ಳಿ ಇರುವ ದರ್ಗಾಕ್ಕೆ ಸುಧಾರವರು ಆರೋಪಿಯನ್ನು ನನ್ನ ಆಟೋದಲ್ಲಿ ಕರೆದುಕೊಂಡು ಹೋಗಿದ್ದರು ಅಲ್ಲಿ ಆರೋಪಿ ದರ್ಗಾದ ಸುತ್ತ ಸುತ್ತುವಾಗ ನನ್ನ ಕುತ್ತಿಗೆಗೆ ಕೈ ಹಾಕಿದ್ದನು ಎನ್ನುತ್ತಾರೆ. ಆ ರೀತಿ ಆರೋಪಿ ನಿಮ್ಮ ಕುತ್ತಿಗೆಗೆ ಏಕೆ ಕೈಯನ್ನು ಹಾಕಿದ್ದನು ಎಂದು ಆತನಿಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ.

12. ಆರೋಪಿಗೆ ತಲೆ ಸರಿ ಇಲ್ಲವೆಂದು ಆತನ ತಾಯಿ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸಾಕ್ಷಿ ಆರೋಪಿಗೆ ತಲೆ ಸರಿಯಾಗಿಯೇ ಇತ್ತು, ಎಲ್ಲರೊಂದಿಗೆ ಚೆನ್ನಾಗಿಯೇ ಮಾತನಾಡುತ್ತಿದ್ದನು, ಆದರೆ ಇದ್ದಕ್ಕಿದ್ದಂತೆ ಚೇಂಜ್ ಆಗುತ್ತಿದ್ದನು ಎನ್ನುತ್ತಾರೆ. ಆರೋಪಿ ಒಮ್ಮೊಮ್ಮೆ ಚೆನ್ನಾಗಿ ಮಾತನಾಡುತ್ತಿದ್ದನು ಆದರೆ ಕೆಲವೊಮ್ಮೆ ಪೆದ್ದನ ರೀತಿ ಮಾತನಾಡುತ್ತಿದ್ದನು.

13. ಸುಧಾರವರು ಬಾಬುಲಾಲ್ ರವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಆ ರೀತಿ ಆಕೆ ಕೆಲಸಕ್ಕೆ ಹೋಗುತ್ತಿದ್ದ

ಸಮಯದಲ್ಲಿ ಆರೋಪಿ ಒಬ್ಬನೇ ಮನೆಯಲ್ಲಿ ಇರುತ್ತಿದ್ದನು. ಆಗ ಸುಧಾರವರು ಆರೋಪಿ ಒಬ್ಬನನ್ನೇ ಮನೆಯಲ್ಲಿ ಬಿಟ್ಟು ಬೀಗವನ್ನು ಹಾಕಿಕೊಂಡು ಹೋಗುತ್ತಿದ್ದರು, ನಂತರ ಅವರು ವಾಪಾಸ್ಸು ಬಂದಾಗ ಬೀಗವನ್ನು ತೆಗೆಯುತ್ತಿದ್ದರು. ಪೊಲೀಸರು ಮಹಜರ್ ಗೆ ಬರುವಂತೆ ನೋಟೀಸನ್ನು ನನಗೆ ಕೊಟ್ಟಿಲ್ಲ. ಮಹಜರ್ ಗೆ ಬರುವಂತೆ ಕರೆದವರು ಬಸವನಹಳ್ಳಿ ಪೊಲೀಸರು.

14. ಮಹಜರ್ ಗೆ ಬಂದಾಗ ನೀವು ಆರೋಪಿಯ ವರ್ತನೆಯನ್ನು ಗಮನಿಸಿದ್ದೀರಾ ಎಂದರೆ ಸಾಕ್ಷಿ ಗಮನಿಸಿದ್ದೇನೆ ಆತನೇ ಪ್ರತಿಯೊಂದನ್ನು ನಮಗೆ ವಿವರಿಸಿದ್ದಾನೆ ಎನ್ನುತ್ತಾರೆ. ಆಟೋ ಸರ್ಕಲ್ ನ ಬಳಿ ಹಲವಾರು ವಾಸದ ಮನೆಗಳು ಇವೆ ಎಂದರೆ ಸರಿ. ಮಹಜರ್ ಗೆ ಪೊಲೀಸರು ಬಂದಾಗ ಫ್ರಾಸಾ.1 ರವರು ಎಲ್ಲಿದ್ದರು ಎಂದರೆ ಸಾಕ್ಷಿ ಆತ ಸಹ ಪೊಲೀಸರೊಂದಿಗೆ ಜೀಪಿನಲ್ಲಿ ಬಂದನು ಎನ್ನುತ್ತಾರೆ.

15. ಆ ದಿನ ಬಾಗಿಲು ತೆಗೆದು ಮನೆಯ ಒಳಗೆ ಹೋಗಿದ್ದಾಗಿ ಹೇಳಿದ್ದೀರಿ ಆಗ ಎಷ್ಟು ಸಮಯದವರೆಗೆ ನೀವು ಅಲ್ಲಿ ಇದ್ದಿರಿ ಎಂದರೆ ಸಾಕ್ಷಿ ಸುಮಾರು ಮುಕ್ಕಾಲು ಗಂಟೆ ಇದ್ದೆವು ಎನ್ನುತ್ತಾರೆ. ಮಹಜರ್ ಸಮಯದಲ್ಲಿ ಫ್ರಾಸಾ.1 ರವರು ಮನೆಯ ಕೀಯನ್ನು ಕೊಡಲು ಬಂದಿದ್ದರು ಆದರೆ ಅವರನ್ನು ಮನೆಯ ಒಳಗೆ ಬಿಟ್ಟುಕೊಂಡಿರಲಿಲ್ಲ. ಆ ದಿನ ಮಹಜರ್ ಗಾಗಿ ಪೊಲೀಸರು ಬಂದಿದ್ದಾಗ ಹಲವಾರು ಜನರು ಸೇರಿದ್ದರು ಎಂದರೆ ಸರಿ.

16. ನಿಪಿ.17 ರಲ್ಲಿರುವ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿದ್ದೀರಿ ಎಂದರೆ ಸಾಕ್ಷಿ ಮೇಲೆ ಹೇಳಿದಂತೆ ಮಹಜರ್ ಗಾಗಿ

ಪೊಲೀಸರು ಬಂದಿದ್ದಾಗ ಮಾಡಿದ್ದೇನೆ ಎನ್ನುತ್ತಾರೆ. ಈ ಪ್ರಕರಣದ ಸಲುವಾಗಿ ನನ್ನನ್ನು ಎಂದಿಗೂ ಸಹ ಪೊಲೀಸರು ಠಾಣೆಗೆ ಕರೆಸಿಲ್ಲ.

17. ನಿಮ್ಮನ್ನು ಮತ್ತು ಚಾಸಾ.10 ರವರನ್ನು ಪೊಲೀಸರು ಸುಧಾರವರು ವಾಸವಾಗಿದ್ದ ಮನೆಗೆ ಕರೆದುಕೊಂಡು ಹೋಗಿದ್ದಾಗಿ, ಪೊಲೀಸರು ಸದರಿ ಮನೆಗೆ ಹಾಕಿದ್ದ ಬೀಗವನ್ನು ತೆಗೆಸಿದ್ದಾಗಿ, ನಂತರ ಆರೋಪಿ ನಿಮ್ಮನ್ನು ಮನೆಯ ಒಳಗೆ ಕರೆದುಕೊಂಡು ಹೋಗಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಅಮ್ಮಾ ಎಲ್ಲಿ ಇದ್ದಾಳೆ ಎಂದು ಕೇಳಿದ್ದಾಗಿ ಆಗ ಪೊಲೀಸರು ಆಕೆ ಆಸ್ಪತ್ರೆಯಲ್ಲಿ ಇದ್ದಾಳೆ ಎಂದು ನೀವು ಹೇಳಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ದಿನ ನೀವು ಆರೋಪಿಯನ್ನು ಮಾತನಾಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

18. ಆರೋಪಿ ನಿಮ್ಮನ್ನು ಮನೆಯ ಒಳಗೆ ಕರೆದುಕೊಂಡು ಹೋಗಿ ಮೊದಲಿಗೆ ಅಡುಗೆ ಮನೆಯ ಹತ್ತಿರ ಹೋಗಿ ಸುಧಾ ರವರು ಅಡುಗೆ ಮಾಡಿ ಪಾತ್ರೆಯನ್ನು ತೊಳೆದಿಟ್ಟು ಬರುವಾಗ ಆರೋಪಿ ಆಕೆಯ ಬಳಿ ದುಡ್ಡನ್ನು ಕೇಳಿದ್ದಾಗಿ ಆಗ ಅವರು ಆತನಿಗೆ ದುಡ್ಡನ್ನು ಕೊಡದಿದ್ದಾಗ ಆತ ಸುಧಾ ರವರ ಜುಟ್ಟನ್ನು ಹಿಡಿದು ಗೋಡೆಗೆ ಗುದ್ದಿದ್ದಾಗಿ ನಂತರ ಅವರು ತಪ್ಪಿಸಿಕೊಂಡು ಓಡಿ ಬರುವಾಗ ಹಾಲಿನಲ್ಲಿದ್ದ ಮನೆಯ ಮುಂಭಾಗದ ಬಾಗಿಲ ಹತ್ತಿರ ಜಾರಿ ಬಿದ್ದಿದ್ದಾಗಿ, ಆಗ ಟೈಲ್ಸ್‌ನ ಕಟ್ಟೆಯ ಭಾಗ ಆಕೆಯ ತಲೆಗೆ ತಾಗಿದ್ದಾಗಿ ನಂತರ ಆರೋಪಿ ತನ್ನ ಕಾಲಿನಿಂದ ಆಕೆಯ ತಲೆಯನ್ನು ತುಳಿದು ಅಲ್ಲಿಯೇ ನಿಂತುಕೊಂಡಿದ್ದಾಗಿ ತಿಳಿಸಿದ್ದಾಗಿ

ಮತ್ತು ಸ್ಥಳವನ್ನು ತೋರಿಸಿದ್ದಾಗಿ ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

19. ಘಟನೆ ಯಾವಾಗ ಮತ್ತು ಎಷ್ಟು ಗಂಟೆಗೆ ನಡೆದಿತ್ತು ಎಂದು ಮೊದಲೇ ಪೊಲೀಸರು ನಿಮಗೆ ತಿಳಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸ್ಥಳದಲ್ಲಿ ಪೊಲೀಸರು ಬೆಳಿಗ್ಗೆ 10.50 ಗಂಟೆಯಿಂದ 11.45 ಅಥವಾ 12.00 ಗಂಟೆಯವರೆಗೆ ನಿಪ.17 ರಂತೆ ಮಹಜರ್ ಜರುಗಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.17 ರಲ್ಲಿ ಬರೆದಿರುವ ವಿಚಾರಗಳು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಮಹಜರ್ ಸಮಯದಲ್ಲಿ ಆರೋಪಿ ಹೇಳುತ್ತಿದ್ದ ವಿಚಾರಗಳನ್ನು ಬರೆದುಕೊಂಡಿದ್ದಾರೆ ಎನ್ನುತ್ತಾರೆ.

20. ಕೇವಲ ಪೊಲೀಸರು ಹೇಳಿದ್ದರಿಂದ ನಿಪಿ.18 ಫೋಟೋಗೆ ನಿಂತುಕೊಂಡಿದ್ದೀರಿ ಹೊರತುಪಡಿಸಿ ಸದರಿ ಫೋಟೋವನ್ನು ಯಾವ ವಿಚಾರಕ್ಕೆ ಅವರು ತೆಗೆದುಕೊಂಡರು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಫ್ರಾಸಾ.1 ರವರು ನಿಮಗೆ ಪರಿಚಯವಿರುವ ಕಾರಣ ಅವರು ಹೇಳಿಕೊಟ್ಟಂತೆ ಈ ದಿನ ಸಾಕ್ಷ್ಯನುಡಿದಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ